ಜೊತೆಗಿರುವ ಗುರುತಿನಿಂದಲೇ ಆಗುತ್ತದೆ. ಯಾವ ಸೂಕ್ಷ್ಮವೂ ಇಲ್ಲದೇ ಆ ಸಂಸ್ಥೆಯನ್ನು ಗುರಿಯಾಗಿಟ್ಟು ಮುಂದುವರೆಯಬಹುದು. ಹೀಗೆ ಸಂಸ್ಥಾಗತ ಗುರುತು ಮತ್ತು ದ್ಯೋತಕಗಳು ನಮ್ಮವರು–ಹೊರಗಿನವರು; ಆತ್ಮೀಯರು–ಇತರರು; ನಮ್ಮತ್ತ ಇರುವ ಬಹುಸಂಖ್ಯಾತರು – ಎದುರಿಗಿರುವ ಅಲ್ಪಸಂಖ್ಯಾತರು – ಹೀಗೆ ಬೈನರಿಗಳನ್ನು ಪೋಷಿಸುವ ಪಾತ್ರ ಮಾಡುತ್ತದೆ. ಇದರಲ್ಲಿ ಮುಖ್ಯವಾದ ಕೆಲಸ – ವಿರೋಧಿಗಳನ್ನು ಶತ್ರುಗಳಾಗಿ ಬಣ್ಣಿಸಿ ಅವರನ್ನು ಗುರುತಿಸುವುದು ಮತ್ತು ಆ ಗುರುತಿಗೆ ಒಂದು ಹೆಸರನ್ನು ನೀಡುವುದು.

ಮೊದಲ ಭಾಗದಲ್ಲಿ ಈ ಆಂದೋಲನ ಮತ್ತು ಕೋಮುಗಲಭೆಯ ಬಗ್ಗೆ ಭಾಟಿಯಾ ಬರೆದರೆ, ಎರಡನೇ ಭಾಗದಲ್ಲಿ ಭೂತಕಾಲದತ್ತ ವಾಲುತ್ತಾರೆ. ಅಂದರೆ, ಈಗಿರುವ ಬಿರುಕಿನ ರಾಜಕೀಯದ ಹಿನ್ನೆಲೆಯ ವಿಚಾರಧಾರೆ ಮತ್ತು ಆ ವಿಚಾರಧಾರೆ ಬೆಳೆದುಬಂದ ರೀತಿಯನ್ನು ದಾಖಲಿಸುತ್ತಾರೆ.

ಭಿನ್ನ ಜಾತಿ, ಭಿನ್ನ ಭಾಷೆ, ಭಿನ್ನ ಸಂಸ್ಕೃತಿ ಮತ್ತು ಊಟೋಪಚಾರದಲ್ಲಿನ ಭಿನ್ನತೆಯನ್ನು ಏಕೀಕರಣಗೊಳಿಸಲು ಒಂದು ದೊಡ್ಡ ಛತ್ರಿ ಬೇಕು. ಒಂದೆಡೆ ಗಾಂಧಿ ಎಲ್ಲರನ್ನೂ ತಮ್ಮ ತಮ್ಮ ಖಾಸಗೀ ವ್ಯಕ್ತಿತ್ವ ಮತ್ತು ಅಸ್ಮಿತೆಗಳನ್ನಿರಿಸಿಕೊಂಡೇ ಬ್ರಿಟಿಷರಾಳ್ವಿಕೆಯ ಪೀಡಿತರೆಂದು ಒಗ್ಗೂಡಿಸಿದರು. ಗಾಂಧಿ ಬ್ರಿಟಿಷರಾಳ್ವಿಕೆಯನ್ನು ವಿರೋಧಿಸಲು ಕರೆಕೊಟ್ಟರೇ ವಿನಾ ಬ್ರಿಟಿಷರನ್ನು ದ್ವೇಷಿಸಬೇಕೆಂದೇನೂ ಹೇಳಲಿಲ್ಲ. ಆದರೆ, ಇತ್ತ ಎಲ್ಲ ಜಾತಿಗಳನ್ನೂ ಒಂದು ದೊಡ್ಡ ಛತ್ರಿಯಡಿಯಲ್ಲಿ ತರುವ ಪ್ರಯತ್ನವೂ ಆಯಿತು. 'ಆರ್ಯ ಸಮಾಜ'ದ ಮೂಲಕ ಸ್ವಾಮಿ ದಯಾನಂದ ಸರಸ್ವತಿ ಮಾಡಿದ ಯತ್ನ ಒಂದೆಡೆಯಾದರೆ, ಮುಸ್ಲಿಮರ ವಿರುದ್ಧವಾಗಿ ಹಿಂದೂ ಏಕತೆಗೆ ಶ್ರಮಿಸಿದ ಮೂಂಜೆ, ಹೆಡಗೇವಾರ್ ಮತ್ತು ಅವರುಗಳು ಸ್ಥಾಪಿಸಿದ ಆರ್.ಎಸ್.ಎಸ್. ಮತ್ತೊಂದೆಡೆ ಆಯಿತು. ಗಾಂಧಿ ಹೋರಾಡಿದ್ದು ಬ್ರಿಟಿಷರಾಳ್ವಿಕೆಯನ್ನು ಇಲ್ಲಿಂದ ಕಿತ್ತೊಗೆಯಲು. 'ಆರ್ಯ ಸಮಾಜ' ಹಿಂದೂ ಏಕತೆಯನ್ನು ಪ್ರತಿಪಾದಿಸಿತು. ಆರ್.ಎಸ್.ಎಸ್. 'ಜಾತಿಗಳನ್ನು ಮೀರಿ ಧರ್ಮ' ಎಂದು ಹಿಂದೂಗಳನ್ನು ಒಂದೆಡೆ ಸೇರಿಸಿ, ಅವರ ಭೀತಿಗೆ ಇಂಧನವಾಗಿ ಒಂದು ಶತ್ರುವನ್ನೂ ನಿರ್ಮಿಸಿತು.

ಈ ಹಿನ್ನೆಲೆಯನ್ನು ಸ್ಥಾಪಿಸಿದ ನಂತರ ಭಾಟಿಯಾ ಸಮಕಾಲೀನ ಸಮಯದಲ್ಲಿ ಆರ್.ಎಸ್.ಎಸ್. ವಿಚಾರಧಾರೆಯು ಕಾರ್ಯರೂಪಕ್ಕಿಳಿದ ರೀತಿ – ಅದು ಉಪಯೋಗಿಸುವ ಸದ್ಯದ ಭಾಷೆ ಮತ್ತು ಪರಿಭಾಷೆ, ವಿಧಿವಿಧಾನಗಳು, ಆ ತತ್ವದ ಚರ್ಚೆ ನಡೆಯುವ ಪರಿ, ಆ ವಿಚಾರಧಾರೆಗೂ ದೆಹಲಿಯ ಕೋಮುಗಲಭೆಗೂ ಇರಬಹುದಾದ ಕೊಂಡಿಗಳನ್ನು ಪರಿಶೀಲಿಸುತ್ತಾರೆ.

ಈ ಕೊಂಡಿಗಳನ್ನು ಪರಿಶೀಲಿಸಿದ ನಂತರ ಲಾಲ್ ಕೃಷ್ಣ ಅದ್ವಾನಿ ಅವರ ರಾಜಕೀಯ ಜೀವನ ಮತ್ತು ರಾಮಮಂದಿರ ಆಂದೋಲನದಲ್ಲಿ ಅವರ ಪಾತ್ರ ಬೆಳೆದುಬಂದ ರೀತಿಯನ್ನು ವಿವರಿಸುತ್ತಾರೆ. ಹಿಂದೂ ಏಕತೆಗೆ ಒಂದು ನಿರ್ದಿಷ್ಟ ಮೂರ್ತ ರೂಪವು ಬಾಬ್ರಿ ಮಸೀದಿ ಧ್ವಂಸ ಮತ್ತು ರಾಮಮಂದಿರ ನಿರ್ಮಾಣದ ಕನಸಿನಲ್ಲಿ ಅಡಕವಾಗಿದೆ. ಇಲ್ಲಿಯೂ ಎಲ್ಲರನ್ನೂ ಒಂದು ಗುರುತಿನಡಿ ಒಗ್ಗೂಡಿಸಲು ಉಪಯೋಗಿಸುವುದು ಶತ್ರುವಿನ ಒಂದು ಪ್ರತೀಕವನ್ನು. ಆ ಸಮಯಕ್ಕೆ ಅದ್ವಾನಿ–ಭಾಜಪ ಅಧಿಕಾರದಲ್ಲಿಲ್ಲ. ಅಧಿಕಾರದಲ್ಲಿದ್ದರೆ ಯಾತ್ರೆ ತೆಗೆಯುವ ಪ್ರಮೇಯವೇನು? ಕೆಲವು ವರ್ಷಗಳ ನಂತರ ಅದ್ವಾನಿ ಭಾರತದ ಉಪಪ್ರಧಾನಿಯೂ, ಗೃಹ ಮಂತ್ರಿಯೂ ಆಗುತ್ತಾರೆ. ಆಗ ದೇಶದ ಸಮಸ್ತ ನಾಗರಿಕರಿಗೆ ಒಂದು ಗುರುತಿನ ಚೀಟಿ ಕೊಡಬೇಕು ಅನ್ನುವ ಯೋಚನೆಯ ಬೀಜಾಂಕುರವಾಗುತ್ತದೆ. ಇಲ್ಲಿರುವ ಉದ್ದೇಶ ಉನ್ನತವಾದದ್ದೇ. ದೇಶದೊಳಕ್ಕೆ ಪಕ್ಕದ ರಾಷ್ಟ್ರಗಳಿಂದ ಕಾನೂನು ಬಾಹಿರವಾಗಿ ಒಳನುಸುಳಿರುವ ಜನರನ್ನು ಗುರುತಿಸುವುದು. ದೇಶದ ಜನತೆಯ ಒಂದು ರಾಷ್ಟ್ರೀಯ ದಾಖಲಾತಿಯ ಕಾರ್ಯಕ್ರಮ ಕೈಗೊಳ್ಳುವುದು. ಇದಕ್ಕಾಗಿ 'ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್'ನ ಅಧಿಕಾರಿಯೊಬ್ಬನೊಂದಿಗೆ ಮಾತುಕತೆಯೂ ಆಗುತ್ತದೆ. ಅಸ್ಸಾಂನಲ್ಲಿ ಆದ ಒಳನುಸುಳುವಿಕೆಯಿಂದ ಉಂಟಾದ ಈ ಯೋಚನೆ ಗಟ್ಟಿಯಾಗಿ ಅವರ ಮನಸ್ಸಿನಲ್ಲಿ ಕೂರುತ್ತದೆ. ಈ ದಾಖಲಾತಿಯಿಂದ ಅನೇಕ ವಿವರಗಳು ಸಿಗುತ್ತವೆ. ಮಾಹಿತಿಯ ಶೇಖರಣೆ ಅಧಿಕಾರದ ಮೂಲವಾಗುತ್ತದೆ.

ಅದ್ವಾನಿಯವರಿಗೆ ಗುರುತಿನ ಚೀಟಿ ಮತ್ತು ಜನರನ್ನು ಗುರುತಿಸುವ ಪ್ರಕ್ರಿಯೆ ಬೇಕಿರುವುದು ಒಂದು ಉದಾತ್ತ ಉದ್ದೇಶಕ್ಕಾಗಿ ಎಂದು ಕಂಡರೂ, ಇದರಲ್ಲೂ ನಮ್ಮವರು–ಹೊರಗಿನವರು, ಮಿತ್ರರು–